ಆ) ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ

ಇ) ಉಪನ್ಯಾಸಕರ ನೇಮಕಾತಿಗೆ ಸಂಬಂಧಿಸಿದಂತೆ, ಇಲಾಖೆಯಲ್ಲಿ ವಿವಿಧ ವಿಷಯಗಳಲ್ಲಿ ಖಾಲಿ ಇರುವ 610 ಉಪನ್ಯಾಸಕರ ಹುದ್ದೆಗಳನ್ನು ತುಂಬಲು ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ

ಪ್ರಸ್ತುತ ಆಯಾ ವಿಷಯಗಳಿಗೆ ಕಾರ್ಯಭಾರಕ್ಕನುಗುಣವಾಗಿ ಹಾಗೂ ಖಾಸಗಿ ಕಾಲೇಜುಗಳಲ್ಲಿ ಕಾರ್ಯಭಾರದ ಕೊರತೆಯಿಂದಾಗಿ, ಹೆಚ್ಚುವರಿ ಎಂದು ಗುರುತಿಸಲ್ಪಟ್ಟ ಉಪನ್ಯಾಸಕರುಗಳನ್ನು ತಾತ್ಕಾಲಿಕವಾಗಿ ನಿಯೋಜಿಸುವ ಮೂಲಕ ಮತ್ತು ಅತಿಥಿ ಉಪನ್ಯಾಸಕರುಗಳನ್ನು ನೇಮಿಸಿ ಕೊಳ್ಳಲಾಗುತ್ತಿದೆ

ಬೋಧಕೇತರ ಸಿಬ್ಬಂದಿಗಳನ್ನು ಬಡ್ತಿ ನೀಡಿ ಸ್ಥಳ ನಿಯುಕ್ತಿಗೊಳಿಸುವ ಮೂಲಕ ಹಾಗೂ ಕೆ ಪಿ ಎಸ್ ಸಿ ಮೂಲಕ ಆಯ್ಕೆಗೊಂಡ ನಂತರ ನೇಮಕಾತಿ ನೀಡಲು ಮತ್ತು ಗ್ರೂಪ್ ಡಿ ಹುದ್ದೆಗೆ ಸಂಬಂಧಿಸಿದಂತೆ, ಬೇರೆ ಇಲಾಖೆಗಳು ಹೆಚ್ಚುವರಿ ಎಂದು ಗುರುತಿಸಿರುವ ನೌಕರರನ್ನು ಮರು ವಿನ್ಯಾಸಗೊಳಿಸುವ ಮೂಲಕ ತುಂಬಲಾಗುತ್ತಿದೆ

ಶ್ರೀ ರಾಜೇಂದ್ರ ವರ್ಮಾ (ಹುಲಸೂರು)133(328)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಹುಲಸೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಂಖ್ಯೆ ಎಷ್ಟು ಹಾಗೂ ಈ ಶಾಲೆಗಳಿಗೆ ಮಂಜೂರಾಗಿರುವ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು,

ಆ) ಈ ಪೈಕಿ ಎಷ್ಟು ಹುದ್ದೆಗಳು ಭರ್ತಿಯಾಗಿವೆ, ಎಷ್ಟು ಹುದ್ದೆಗಳು ಖಾಲಿ ಇವೆ, ಎಷ್ಟು ದಿನದಿಂದ ಖಾಲಿ ಇವೆ,

ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಎಸ್ ಬಸವರಾಜ ಹೊರಟ್ಟಿ

ಅ) ಸರ್ಕಾರಿ ಪ್ರಾಥಮಿಕ ಶಾಲೆ

ಹುಲಸೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ 142 ಸರ್ಕಾರಿ ಪ್ರಾಥಮಿಕ ಶಾಲೆಗಳಿವೆ ಸದರಿ ಶಾಲೆಗಳಿಗೆ ಒಟ್ಟು 983 ಶಿಕ್ಷಕರ ಹುದ್ದೆಗಳು ಮಂಜೂರಾಗಿದೆ

ಸರ್ಕಾರಿ ಪ್ರೌಢ ಶಾಲೆ

ಹುಲಸೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ 15 ಸರ್ಕಾರಿ ಪ್ರಾಥಮಿಕ ಶಾಲೆಗಳಿವೆ

ಸದರಿ ಶಾಲೆಗಳಿಗೆ ಒಟ್ಟು 141 ಶಿಕ್ಷಕರ ಹುದ್ದೆಗಳು ಮಂಜೂರಾಗಿದೆ

ಆ) ಈ ಪೈಕಿ ಪ್ರಾಥಮಿಕ ಶಾಲೆಗಳಲ್ಲಿ 927 ಹುದ್ದೆಗಳು ಭರ್ತಿಯಾಗಿವೆ 56 ಹುದ್ದೆಗಳಿಗೆ ಸುಮಾರು ಒಂದು ವರ್ಷದಿಂದ ಖಾಲಿ ಇವೆ ಈ ಪೈಕಿ ಪ್ರೌಢಶಾಲೆಗಳಲ್ಲಿ 127 ಹುದ್ದೆಗಳು ಭರ್ತಿಯಾಗಿವೆ 14 ಹುದ್ದೆಗಳು ಸುಮಾರು 2–3 ವರ್ಷಗಳಿಂದ ಖಾಲಿ ಇವೆ

ಇ) ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ಈಗಾಗಲೇ ಮ್ಯಾಟ್ರಿಕ್ಸ್ ಸಿದ್ಧಪಡಿಸುತ್ತಿದ್ದು, ಇದರಲ್ಲಿ ಈ ಹುದ್ದೆಗಳು ಒಳಗೊಂಡಿದ್ದು ಇನ್ನೊಂದು ವಾರದಲ್ಲಿ ಅಧಿಸೂಚನೆ ಹೊರಡಿಸಲಾಗುವುದು

ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ 14 ಹುದ್ದೆಗಳನ್ನು 2006–07ನೇ ಸಾಲಿನ ನೇಮಕಾತಿಯಲ್ಲಿ ಆಯ್ಕೆ ಹೊಂದಿದ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುತ್ತಿದೆ